For more job news visit : www.kpscvaani.com

ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 198 ಬಿಎಸ್‌ಸಿ 2025

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಡಾ|| ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:20.06.2026.

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಕಂದಾಯ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

"ಇಂದೇ"

ಇವರಿಗೆ:
ಜಿಲ್ಲಾಧಿಕಾರಿಗಳು,
ಬೆಂಗಳೂರು ನಗರ / ಬೆಂಗಳೂರು ಗ್ರಾಮಾಂತರ / ಚಿತ್ರದುರ್ಗ/ ಚಿಕ್ಕಬಳ್ಳಾಪುರ / ತುಮಕೂರು / ಶಿವಮೊಗ್ಗ / ಕೋಲಾರ / ಬೆಂಗಳೂರು ದಕ್ಷಿಣ (ರಾಮನಗರ) / ಮೈಸೂರು/ ಮಂಡ್ಯ / ಹಾಸನ / ಉಡುಪಿ/ ದಕ್ಷಿಣ ಕನ್ನಡ / ಚಾಮರಾಜನಗರ / ಚಿಕ್ಕಮಗಳೂರು / ಬೆಳಗಾವಿ / ಬಾಗಲಕೋಟೆ / ಗದಗ / ಹಾವೇರಿ / ಕಲಬುರಗಿ / ಬೀದರ್ / ರಾಯಚೂರು ಜಿಲ್ಲೆಗಳು.

ಮಾನ್ಯರೇ,

ವಿಷಯ:- ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮ ಆಡಳಿತ ಅಧಿಕಾರಿಗಳ ನೇರ ನೇಮಕಾತಿ ಕುರಿತು.

ಉಲ್ಲೇಖ:- 1. ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ:ಆಇ 730 ವೆಚ್ಚ-7/2023, ಆರ್ಥಿಕ ಇಲಾಖೆ (ವೆಚ್ಚ-7), ದಿನಾಂಕ:17.06.2026.
2. ಸರ್ಕಾರದ ಆದೇಶ ಸಂಖ್ಯೆ: ಸಕಿ 515 ಪಕಎ 2026, ದಿನಾಂಕ:08.5.2026.
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೇಹಿಮ 2026, ದಿನಾಂಕ:13.05.2026.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಂದಾಯ ಇಲಾಖೆಯಲ್ಲಿ ಖಾಲಿ ಇರುವ 572 ಗ್ರಾಮ ಆಡಳಿತ ಅಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಆರ್ಥಿಕ ಇಲಾಖೆಯು ಉಲ್ಲೇಖ(1)ರ ಪತ್ರದಲ್ಲಿ ಸಹಮತಿ ನೀಡಿದೆ. ಈ ಪೈಕಿ ಜಿಲ್ಲಾವಾರು ಭರ್ತಿ ಮಾಡಬೇಕಾದ ಹುದ್ದೆಗಳ ಸಂಖ್ಯಾ ವಿವರಗಳನ್ನು ಕೆಳಕಂಡಂತೆ ನೀಡಲಾಗಿದೆ.

ಕ್ರ.ಸಂ	ಜಿಲ್ಲೆಯ ಹೆಸರು	ಮಂಜೂರಾದ VAO ಹುದ್ದೆಗಳು	ಖಾಲಿ ಇರುವ ಹುದ್ದೆಗಳು	ಪ್ರಸ್ತುತ ನೇಮಕಾತಿಗಾಗಿ ಪರಿಗಣಿಸುತ್ತಿರುವ ಹುದ್ದೆಗಳ ಸಂಖ್ಯೆ
(1)	(2)	(3)	(4)	(5)
1	ಬೆಂಗಳೂರು ನಗರ	252	32	20
2	ಬೆಂಗಳೂರು ಗ್ರಾಮಾಂತರ	223	47	29
3	ಚಿತ್ರದುರ್ಗ	356	37	15
4	ಚಿಕ್ಕಬಳ್ಳಾಪುರ	266	45	21
5	ತುಮಕೂರು	305	78	50

6	ಶಿವಮೊಗ್ಗ	275	44	18
7	ಕೋಲಾರ	289	44	22
8	ಬೆಂಗಳೂರು ದಕ್ಷಿಣ	376	55	30
9	ಮೈಸೂರು	479	75	45
10	ಮಂಡ್ಯ	258	71	50
11	ಹಾಸನ	475	52	35
12	ಉಡುಪಿ	459	23	10
13	ದಕ್ಷಿಣ ಕನ್ನಡ	134	48	37
14	ಚಾಮರಾಜನಗರ	215	50	31
15	ಚಿಕ್ಕಮಗಳೂರು	326	29	10
16	ಬೆಳಗಾವಿ	648	82	48
17	ಬಾಗಲಕೋಟೆ	297	30	16
18	ಗದಗ	232	33	14
19	ಹಾವೇರಿ	295	41	15
20	ಕಲಬುರಗಿ	410	66	35
21	ಬೀದರ್	193	34	16
22	ರಾಯಚೂರು	200	22	5
			ಒಟ್ಟು	572

ನೇರ ನೇಮಕಾತಿ ಕೋಟಾದಡಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಅನುಸರಿಸಬೇಕಾದ ಪರಿಷ್ಕೃತ ರೋಸ್ಟರ್ ಬಿಂದು/ಮೀಸಲಾತಿಯ ವಿವರಗಳನ್ನು ಉಲ್ಲೇಖ (2) ಮತ್ತು (3)ರ ಸರ್ಕಾರದ ಆದೇಶಗಳಲ್ಲಿ ಮರುನಿಗಧಿಪಡಿಸಲಾಗಿದೆ. ಆದ್ದರಿಂದ, ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಮೇಲಿನ ಪಟ್ಟಿಯಲ್ಲಿ ಆಯಾ ಜಿಲ್ಲೆಗಳಿಗೆ ಪ್ರಸ್ತುತ ಭರ್ತಿ ಮಾಡಲು ತಿಳಿಸಿರುವ ಗ್ರಾಮ ಆಡಳಿತ ಅಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಮಾಹಿತಿಯನ್ನು ನಿಗಧಿತ ನಮೂನೆ-6ರಲ್ಲಿ ಭರ್ತಿ ಮಾಡಿ ಪ್ರಸ್ತಾವನೆಯನ್ನು ಇಂದೇ ಸರ್ಕಾರಕ್ಕೆ ಸಲ್ಲಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ನಾಗರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-2)